DOC-268
T-P-2

R.No KRNN 12 4-4-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ
First Golden Jubilee Celebrated Paper in The State
** Now in 57th Year **
'Satyavadi' daily, Mysore 4

ಸ್ಥಾಪಕರು: ಆರಮನೆ ಶಿರಸ್ತೇದಾರ್ ಎಂ. ವಿ ಸುಬ್ಬರಾವ್ ಸಂಪಾದಕರು: ಧರ್ಮಸ್ಥ್ರೀ ಚಂದನಂತ ಎಂ. ಎಸ್ ಕೃಷ್ಣರಾವ್ [3 ಸಂಸ

ಈ ವರ್ಷ ತಾಲೋಕು ಮಂಡಲಿ ಚುನಾವಣೆ

ಕ್ಲಾಸ್‌ರೂಂಗಳು

ಬೆಂಗಳೂರು— 5 ನೇ ಯೋಜನೆಯಲ್ಲಿ ಸ್ಕೂಲುಗಳಲ್ಲಿ ತಲಾ ರೂ 3000 ಬೆಲೆಯ 13500 ಕ್ಲಾಸ್ ರೂಂಗಳನ್ನು ನಿರ್ಮಿಸಲು ಸರ್ಕಾರ ತೀರ್ಮಾನಿಸಿರುವುದೆಂದು ಶಾಸನಸಭೆಯಲ್ಲಿ ತಿಳಿಸಲಾಯ್ತು.

★

ಲೋಕ್ ಅಯುಕ್ತ

ಬೆಂಗಳೂರು– ರಾಜಕೀಯ ನಾಯಕರ ಮೇಲಿನ ಆಪಾದನೆ ಪರಿಶೀಲನೆ ಮಾಡಲು 'ಲೋಕ್ ಅಯುಕ್ತ' ನುಸೂದೆಯನ್ನು ಈ ಅಧಿವೇಶನದಲ್ಲೇ ತರಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಶಾಸನಸಭೆಯಲ್ಲಿ ತಿಳಿಸಿದರು.

★

ಜೈ ಕರ್ನಾಟಕ

ಬೆಂಗಳೂರು– ರಾಂಜಿ ಟ್ರೋಫಿಯಲ್ಲಿ ಕರ್ನಾಟಕ ಕ್ರಿಕೆಟ್ ತಂಡ ಗೆದ್ದು ಕೀರ್ತಿ ತಂದಿತು – ಇದೇ ರೀತಿ ರಾಜ್ಯದ ಲೈಟ್ ವೇಟ್ ಲಿಫ್ಟ್‌ಗಳು ಕಲ್ಕತ್ತಾದಲ್ಲಿ ನಡೆದ ಈ ಸಂಬಂಧದ ಪಂಥದಲ್ಲಿ 4 ಚಿನ್ನ 2 ಬೆಳ್ಳಿ, 1 ಕಂಚಿನ ಪದಕಗಳನ್ನು ಗೆದ್ದರು – ಮೈಸೂರು ಕುವೆಂಪು. ಮೈಸೂರು ಶ್ರೀ ಪ್ರಶಸ್ತಿ ಪಡೆದಿರುವ ಶ್ರೀ ಮಂಜುನಾಥ ಹೆಗ್ಗಡೆಯವರು "ಭಾರತ ಕುಮಾರ್" ಪ್ರಶಸ್ತಿ ಗಳಿಸಿರುವರು.

★

ಎಚ್ಚರದಿಂದಿರುವುದರ ದಾಖಲೆ

ಶಾಂತಿ ಸಾಗರದ ತೀರದಲ್ಲಿಯ ವಾಣಿಜ್ಯೋದ್ಯಮಿ ರೋಜರ್ ಗೋ ಇಂಗ್ಲೀಷ್ ರವರು 12 ದಿನಗಳು ಅಥವಾ 288 ಗಂಟೆಗಳು ಎಚ್ಚರವಾಗಿದ್ದು ವಿಶ್ವ ದಾಖಲೆ ಸ್ಥಾಪಿಸಿರುವರು – ಹಿಂದಿನ ದಾಖಲೆ 282 ಗಂಟೆ 55 ನಿಮಿಷ ಒಬ್ಬ ದಕ್ಷಿಣ ಆಫ್ರಿಕನು ಎಚ್ಚರವಿದ್ದುದು

ಆಪಾದನೆ

ಉಜ್ಜಯಿನಿ— ಕಾಂಗ್ರೆಸ್ ಸರ್ಕಾರ ಆರ್ಥಿಕ ರಂಗದಲ್ಲಿ ದುರವಸ್ಥಿತವಾಗಿದ್ದು

ದಿವ್ಯವಾಣಿ

ಎರಡನೇ ದುರ್ಗುಣ ಸುಳ್ಳು ಹೇಳುವುದು; ಮೊದಲನೆಯದು ಸೋಲಮಾಡುವುದು

— ಬೆನ್‌ಜಮಿನ್ ಫ್ರಾಂಕ್‌ಲಿನ್

★

ಸುಮಿತ್ರಾ ದೇಸಾಯಿ

ಪೂನಾ— ದಕ್ಷಗಿರಿ ಮಾಡಲ್ಪಟ್ಟಿದ್ದ ಸುಮಿತ್ರಾ ದೇಸಾಯಿಯನ್ನು ಸ್ವಂತ ಮುಚ್ಚಳಿಕೆಯ ಮೇಲೆ ಜುಡಿಷಿಯಲ್ ಮ್ಯಾಜಿಸ್ಟ್ರೇಟರು ಬಿಡುಗಡೆ ಮಾಡಿದರೂ – ಇಲ್ಲಿಗೆ ಬರುವ ಪ್ರಧಾನಿ ಇಂದಿರಾರವರನ್ನು ಕಾಣಲು ಈಕೆ ಪ್ರಯತ್ನಿಸಬಹುದು ಎನ್ನಲಾಗಿದೆ

★

ಭೂಸುಧಾರಣೆ ಶಾಸನ ವಿರುದ್ಧ ಉಪವಾಸ

ಹುಬ್ಬಳ್ಳಿ– ಭೂ ಸುಧಾರಣಾ ಶಾಸನದಲ್ಲಿ ಮಠ, ದೇವಾಲಯ, ಧರ್ಮಸಂಸ್ಥೆಗಳ ಭೂಮಿಗಳಿಗೆ ವಿನಾಯಿತಿ ಕೋರಿ ಕಳೆದ 6 ದಿನಗಳಿಂದ ಉಪವಾಸ ಕೈಗೊಂಡಿರುವ ಶ್ರೀ ಶಂಕರಪ್ಪ ಪಾಟೀಲರನ್ನು ಉಪವಾಸ ನಿಲ್ಲಿಸಲು ಪೇಜಾವರ ಮಠದ ಸ್ವಾಮಿಗಳೂ ಮೂರು ಸಾವಿರ ಮಠದ ಸ್ವಾಮಿಗಳೂ ಒತ್ತಾಯ ಮಾಡಿದ್ದಾರೆ – ಅವರ ತೂಕ 105 ಕೆಜಿ ಇಳಿದಿದೆ.

★

ತಾಲ್ಲೂಕು ಬೋರ್ಡು ಚುನಾವಣೆ

ಬೆಂಗಳೂರು— ತಾಲ್ಲೂಕು ಅಭಿವೃದ್ಧಿ ಮಂಡಲಿಯು ಡಿಸೆಂಬರ್ ವಳಗೆ ನಡೆಸಲು ಸರಕಾರ ನಿರ್ಧರಿಸಿರುವದೆಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು – ಪಂಚಾಯಿತ್ ಚುನಾವಣೆಯನ್ನು 1975 ನೇಜನವರಿಗೆ ಮುಂಚೆ ನಡೆಸಲಾಗುವುದೆಂದೂ ತಿಳಿಸಲಾಯಿತು.

ದೇಶವು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಕ್ಕಿರುವುದೆಂದು ಜನಸಂಘದ ನಾಯಕ ಶ್ರೀ ಎ ಬಿ ವಾಜಪೇಯಿಯವರು ಪತ್ರಿಕೆಯವರಿಗೆ ತಿಳಿಸಿದರು

ಸತ್ಯ ಮತ್ತು ಅಹಿಂಸೆ

(ಮಹಾತ್ಮಾ ಗಾಂಧಿಯವರ ಸಂದೇಶ – ಲೇ; ಶ್ರೀ ಯು.ಎಸ್.ವೆಂಕಟರಾವ್

ನಾನು ಕಳೆದ 50 ವರ್ಷಗಳಿಂದ ಸತತವಾಗಿ, ನಿಷ್ಠಪಟವಾಗಿ ಅಹಿಂಸೆಯನ್ನು ಆಚರಿಸಿಕೊಂಡು ಬಂದಿರುತ್ತೇನೆ; ಗೃಹಕೃತ್ಯಗಳಲ್ಲೂ ಸಂಘಸಂಸ್ಥೆಗಳಲ್ಲೂ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲೂ ಅಹಿಂಸೆಯ ತತ್ವಗಳನ್ನು ಪರೀಕ್ಷಿಸಿ ಪ್ರಯೋಗಿಸಿದ್ದೇನೆ; ನನ್ನ ಈ ಪ್ರಯೋಗಗಳಲ್ಲಿ ಯಾವದೂ ವಿಫಲವಾಗಿಲ್ಲ; ನನ್ನ ಈ ಪ್ರಯೋಗದಲ್ಲಿ ಯಾವುದಾದರೂ ಸಫಲಗೊಂಡಿದ್ದರೆ, ಅದಕ್ಕೆ ನನ್ನ ಅಪೂರ್ಣ ಸಾಧನೆಯೇ ಕಾರಣವೆಂದು ಮನಗೊಂಡಿದ್ದೇನೆ; ನಾನು ಎಲ್ಲದರಲ್ಲಿಯೂ ಪರಿಪೂರ್ಣನಾಗಿ ಹೇಳಿಕೊಳ್ಳುವುದಿಲ್ಲ; ಆದರೆ ನಾನು ಸತ್ಯದ ಅನ್ವೇಷಣದಲ್ಲಿ, ದೇವರನ್ನು ಕಾಣುವ ಕನಸಿನಲ್ಲಿ ಮುನ್ನಡೆಯುತ್ತಿದ್ದೇನೆ ಎಂದು ಮಾತ್ರ ಹೇಳಿಕೊಳ್ಳುತ್ತೇನೆ; ಸತ್ಯದ ಈ ಶೋಧನೆಯಲ್ಲಿ, ನನಗೆ ಅಹಿಂಸೆಯ ಅರಿವು ಮೂಡಿತು; ಈ ಅಹಿಂಸೆಯನ್ನು ಪ್ರತಿಪಾದಿಸುವುದೇ ನನ್ನ ಜೀವನದ ಧ್ಯೇಯವಾಗಿದೆ; ಈ ಧ್ಯೇಯವನ್ನು ಮುಂದುವರಿಸಿಕೊಂಡು ಬರುವುದನ್ನು ಬಿಟ್ಟು ಜೀವನದಲ್ಲಿ ನನಗೆ ಇತರ ಆಸೆಯಾಗಲೀ ಆಶಕ್ತಿಯಾಗಲೀ ಇಲ್ಲ

ಸ್ವಾರ್ಥತ್ಯಾಗದ ಪುರಾತನ ಕಟ್ಟಳೆಗಳನ್ನು ಭಾರತ ಜನರ ಮನದಿಂದ ಅಳಿಸಲು ನಾನು ಪ್ರಯತ್ನಿಸುತ್ತಿದ್ದೇನೆ; ಸತ್ಯಾಗ್ರಹ ಮತ್ತು ಅದರಿಂದ ಹುಟ್ಟಿಕೊಂಡಿರುವ ಅಸಹಕಾರ ಚಳವಳಿ ಮತ್ತು ನಾಗರೀಕ ಪ್ರತಿಭಟನೆಯು ಮತ್ತೇನೂ ಆಗಿರದೆ ಸ್ವಾರ್ಥತ್ಯಾಗದ ವಿವಿಧ ಸ್ವರೂಪಗಳಾಗಿವೆ.

ಹಿಂಸೆಯಲ್ಲೂ ಸಹ ಅಹಿಂಸೆಯ ಅಂಶವಿದೆ ಎಂಬ ಅಂಶವನ್ನು ಕಂಡುಹಿಡಿದ ಋಷಿಗಳು ನ್ಯೂಮನ್‌ಗಿಂತಲೂ ಹೆಚ್ಚು ಪ್ರತಿಭಾಶಾಲಿಗಳಾಗಿದ್ದರು, ವೆಲ್ಲಿಂಗ್‌ಟನ್‌ಗಿಂತ ನುರಿತ ವೀರ ಯೋಧರಾಗಿದ್ದರು; ಶಸ್ತ್ರಾಸ್ತ್ರಗಳ ಬಳಕೆಯನ್ನು ಅರಿತಿದ್ದ ಅವರು, ಅವುಗಳ ನಿಷ್ಪ್ರಯೋಜಕತೆಯನ್ನು ಸಹ ಅರಿತಿದ್ದರು; ಅಹಿಂಸೆಯಿಂದ ಮಾತ್ರ ನನಗೆ ಮೋಕ್ಷ ದೊರೆಯುವುದೇ ವಿನಃ ಹಿಂಸೆಯಿಂದಲ್ಲ ಎಂಬುದನ್ನು ಈ ಋಷಿಗಳು ಬೋಧಿಸಿದರು.

ಜೀವನದ ಸಂಕಷ್ಟಗಳನ್ನು ಸಹಿಸಿಕೊಂಡಿರಲು ಅಹಿಂಸೆಯು ಒಂದು ರಚನಾತ್ಮಕವಾದ ಸ್ಫೋರಕ ಶಕ್ತಿಯಾಗಿದೆ. ಪಾಪ ಕರ್ಮಗಳ ಮತ್ತು ಕೆಡಕು ಮಾಡುವವರ ಸ್ವೇಚ್ಛೆಗೆ ಬಾಗಿ ನಡೆಯುವುದು ಇದರ ಅರ್ಥವಲ್ಲ; ಕ್ರೂರಿಗಳ, ದುಷ್ಟ ಜನತೆ ವಿರುದ್ಧ ನಮ್ಮ ಇಚ್ಛೆಯನ್ನೇ ಧಾರಣವಾಗಿಡುವುದು ಇದರ ಅರ್ಥ. ಈ ಕಟ್ಟಳೆಗೆ ಅನುಸರಣೆಯಾಗಿ ನಡೆದುಕೊಂಡಲ್ಲಿ ಇಡೀ ಸಾಮ್ರಾಜ್ಯದ ವಿರುದ್ಧ ಹೋರಾಡಲು ನಮಗೆ ಸಾಧ್ಯವಾಗುತ್ತದೆ. ಈ ನಿಯಮಗಳನ್ನು ಅನುಸರಿಸಿ ನಾವು ನಮ್ಮ ಘನತೆ ಗೌರವಗಳನ್ನು, ಧಾರ್ಮಿಕ ನಂಬಿಕೆಗಳನ್ನು, ನಮ್ಮ ಇಚ್ಛೆಯನ್ನು ಕಾಪಾಡಿಕೊಂಡು, ಅನ್ಯಾಯವನ್ನು ಸಾಮ್ರಾಜ್ಯದ ಶಕ್ತಿಯನ್ನು ಅಲುಗಾಡಿಸಬಹುದಾಗಿದೆ; ಸಾಮ್ರಾಜ್ಯಶಾಹಿಯು ತನ್ನ ತಲೆಎತ್ತದಂತೆ ಅದನ್ನು ನಿರ್ಮೂಲಗೊಳಿಸಬಹುದಾಗಿದೆ.

ಅಹಿಂಸೆಯನ್ನು ಒಂದು ದುರ್ಬಲ ಸಾಧನವಾಗಿರುವುದರಿಂದ್ದ ಅದನ್ನು ಉಪಯೋಗಿಸಬೇಕೆಂಬುದು ನನ್ನ ವಾದವಲ್ಲ ; ಭಾರತದ ಶಕ್ತಿ ಸಾಮರ್ಥ್ಯಗಳನ್ನು ಅರಿತುಕೊಂಡೇ ಅದು ಅಹಿಂಸೆಯ ಮಾರ್ಗವನ್ನು ಅನುಸರಿಸಬೇಕು ಎಂದು ನಾನು ಉಪದೇಶಿಸುತ್ತಿದ್ದೇನೆ. ಭಾರತವು ತನ್ನ ಶಕ್ತಿ ಸಾಮರ್ಥ್ಯವನ್ನು ಅರಿತುಕೆದಳ್ಳುವುದಕ್ಕಾಗಿ ಶಸ್ತ್ರಾಸ್ತ್ರಗಳನ್ನು ಪಡೆಯಬೇಕಾಗಿಲ್ಲ ಅಥವಾ ಅವನ್ನು ಗಳಿಸಬೇಕಾಗಿಲ್ಲ.

ಭಾರತವು ತನ್ನಲ್ಲಿರುವ ಅಂತಃಶಕ್ತಿಯನ್ನು ಮನಗಾಣಬೇಕು ; ತನ್ನ ಭೌತಿಕ ದುರ್ಬಲತೆಯನ್ನು ನೆಟ್ಟಿ ನಿಂತು, ವಿಜಯೋತ್ಸಾಹದಲ್ಲಿ ಮೆರೆಯಬೇಕು ; ವಿಶ್ವದ ಭೌತಿಕ-ಒತ್ತಡಗಳನ್ನು, ಪ್ರಭಾವವನ್ನು ಪ್ರತಿಭಟಿಸಿ, ಸ್ವಾವಲಂಬಿಯಾಗುವ ಶಕ್ತಿ ಭಾರತಕ್ಕೆ ಬರಬೇಕೆಂದು ನಾನು ಬಯಸುತ್ತೇನೆ.

ವುಡ್‌ಲಾಂಡ್ 4 4 74 ರಿಂದ

ಅವೋಫು 2 ನೇ ವಾರ

ರಿ ಕ್ ಷಾ ವಾ ಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ – ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಲಾಸಿನ್ಹಾ

ದಿನ 3 ಪ್ರದರ್ಶನಗಳು

ಅಪೆರಾ 4 4 74 ರಿಂದ

ನೈನ

ಅನೋಫೆ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಪಾತ್ರ – ಶಶಿಕಪೂರ್ ಮೌಸಮಿ ಚಟರ್ಜಿ ಸಂಗೀತ – ಶಂಕರ್ ಜೈಕಿಷನ್

ದಿನ 3 ಪ್ರದರ್ಶನಗಳು

Remember

You are quite safe in your dealings with

Bank Road Bahusar

Firm Noted for Genuine Good Business

SHAKTI

SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet, Mysore 1

ಭಾರತದಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Help The Gorakshana

— HumanitarianPropoganda Monthly —

Edited Printed and Published by Dharmapracharanirata M S Krishna Rao (Proprietor) at the Satyavadi Press, Chamarajapuram Mysore